## ಬೆಂಗಳೂರು ಡಿಸ್ಟ್ರಿಕ್ಟ್.

### ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 876.

ಮೃತಪಟ್ಟ ಮರಿಬಸಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರುದ್ರಪ್ಪ ಮೃತಪಟ್ಟ ಸದರೀ ಮರಿಬಸಪ್ಪನಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ನೆಲವಂಗಲ ಸ್ಥಳದ ಮರಿಬಸಪ್ಪನು ನೆಲವಂಗಲ ವಾಸಸ್ಥನಾಗಿ ಮೃತಪಟ್ಟ ಮರಿಬಸಪ್ಪನ ಜಿಂದಗೀ ಭಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾರಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರುದ್ರಪ್ಪನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅಕ್ಟೋಬರ್ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

---

ದಿವಾಳೀಯಾದ ಡಿಕ್ರೀ ದೇಣೇದಾರ ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿ ಯಿರತಕ್ಕ ಗರುಡಾ ವುರಫ್ ತಿಪ್ಪಯ್ಯನ ವಿಷಯದಲ್ಲಿ—

ಸ|| 1887ನೇ ಇಸವಿ ದಿವಾಳೀ ಕೇಸ್ ನಂಬರ್ 467.

ಹುಕ್ಕುಂ.

ಮೇಲ್ಕಂಡ ತಿಪ್ಪಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ತಿಪ್ಪಯ್ಯನ ಪರವಾಗಿ ಮೆ|| ಅಡ್ವೊಕೇಟ್ ನರಸುಹ್ಮಯ್ಯಂಗಾರ್‌ನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 1ನೇಯವರ ತರಫ್ ಅಡ್ವೊಕೇಟ್ ಮೆ|| ಕೆ. ಶ್ರೀನಿವಾಸಯ್ಯಂಗಾರ್‌ರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗರುಡ ವುರಫ್ ತಿಪ್ಪಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ|| 1887ನೇ ಇಸವಿ ಆಗಸ್ಟು 8ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

| ನಂಬರು. | ಲೇಣೇದಾರ್‌ರು ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ. | ಸಾಲದ ಮೊಬಲಗು. | ಯಾವಾಗದೇಣೇ ಕಂತಿಗಾದರೂ. | ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ. | ಷರಾ. |
|---|---|---|---|---|---|
| 1 | ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿರತಕ್ಕ ತಿಮ್ಮಣ್ಣಶಾಸ್ತ್ರಿ . . . . | 380 0 0<br>100 0 0<br>117—7—6 | . .<br>. .<br>. . | ಡಿಕರೀ ಬಾಬತ್ತು.<br>ಪತ್ರದ ಬಾಬತ್ತು.<br>ಕಂದಾಯದ ಬಾ|| ಇದರ ಬಡ್ಡೀ ಸಹ | |
| | ಜುಮ್ಲಾ . . | 597—7—6 | | | |

ತಾರೀಖು 21ನೇ ಅಕ್ಟೋಬರ್ 1887.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಶಿದ್ದೀಕಟ್ಟೀಲಿರತಕ್ಕ ಓರ್ಸಾ ಆಫೀಸ್ ಜವಾನ ರಾಮನ ವಿಷಯದಲ್ಲಿ—

ಸ್ ಸ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 527.

ಹುಕ್ಕುಂ.

ಮೇಲ್ಕಂಡ ರಾಮನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರಿಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರಾಮನ ಪರವಾಗಿ ಮೆ|| ಅಡ್ವೋಕೇಟ್ ನರಸುಹ್ಮಯ್ಯಂಗಾರ್ರನ್ನೂ ಮತ್ತೂ ಸದರೀಯವನ ಲೇಣೇದಾರ್ರಾದವರ ತರಫ್ 1—2—3—4ನೇರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ.—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವಸ್ಸು ಸದರೀ ರಾಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ, ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟ್ಯಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥಿರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ಸ 1887ನೇ ಇಸವಿ ಅಕ್ಟೋಬರ್ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟ್ಯ.

| ನಂಬರು. | ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ. | ಸೊಲಲಗ್ಗು. | ಯಾವಾಗ ಸಿಕ್ಕೀ ಬೀಳುವದು | ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ. | ಟೀಕೆ. |
|---|---|---|---|---|---|
| 1 | ಬೆಂಗಳೂರು ಮಹರುಪ್ಪ್ಯ ಬ್ಯಾಂಕಿಗೆ .. | 166 | 1380 | ಡಿಕರೀ | |
| 2 | ಡಿಟೋ ಧನಾಭಿವೃದ್ಧೀ ಬ್ಯಾಂಕಿಗೆ .. | 25 ರೂ. | .. | ಡಿಟೋ | |
| 3 | ಡಿಟೋ ಜವಳಿ ಅಂಗಡಿ ಬೋರಂಣ .. | 5 | .. | ಡಿಟೋ | |
| 4 | ಕಲಾಪಾಳ್ಯದ ಚೀಬಂಣಿಗೆ .. | 20 | .. | ಮೂಬದಲೇ ಬಾಬತು | |
| | ಜುಮ್ಲಾ .. | 216 | | | |

ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದ ಕೋಟೆಲಿರುವ ಭೀಮರಾವನ ವಿಷಯದಲ್ಲಿ—

ಸ್ ಸ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 550.

ಹುಕ್ಕುಂ.

ಮೇಲ್ಕಂಡ ಭೀಮರಾವು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ಮೆ|| ಕ. ಕ್ರಿಸ್ ಸಾಹೆಬರವರ ರೂಬರೂ ಅರ್ಜೀದಾರನಾದ ಭೀಮರಾವು ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯವರ ತರಫ ಪ್ಲೀಡರ್ ಗಂಗಾಧರಯ್ಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—2—3—4—5—6ನೇ ಯವರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಭೀಮರಾವು . ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ರ 1887ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

| ನಂಬರ್. | ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ. | ಜೊಬಲಗು. | | | ಯಾವಾಗ ಹೇಣೆ ಹುಟ್ಟಿದ್ದು. | ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ. | ಷರಾ. |
|---|---|---|---|---|---|---|---|
| 1 | ಚ್ಕಬಳ್ಳಾಪುರದಲ್ಲಿರುವ ದೆವಂಡಹಳ್ಳಿ ಬಸಪ್ಪನವರ ಚಿಕ್ಕಮುನಿಯಪ್ಪ .. | 672 | 0 | 0 | 1885 | ಡಿಕರೀ ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು ಬಾಬತು ನಂಬರ್ 241. | |
| 2 | ಡಿಟೋ ಕನ್ನಪೆಟ್ಟೆಪ್ಪನವರ ಪುಟ್ಟಿಂಣ .. | 147 | 7 | 5 | .. | ಚಂದ್ರಪ್ಪಗೆ ಜಾಮೀನಾಗಿ ಕೊಡಿಸಿದ್ದು | |
| 3 | ಡಿಟೋ ಸ್ಟ್ಯಾಂಪ್‌ವೆಂಡರ್ ಗೋವಿಂದಪ್ಪ .. | 574 | 13 | 6 | .. | ಡಿಟ್ಟೋ | |
| 4 | ಡಿಟೋ ಸುಬ್ರಹ್ಮಣ್ಯೇಶ್ವರ ಬ್ಯಾಂಕ್ .. | 182 | 4 | 10 | .. | ಡಿಟೋ | |
| 5 | ಶಿಂಗೇರೀ ಕೊಪ್ಪದಲ್ಲಿ ಇರತಕ್ಕ ಇಂಜನಿಯರ್ ಇಲಾಖಾ ಓವರಸೀ ಸೂರ್ಯನಾರಾಯಣರಾವು .. | 100 | 0 | 0 | .. | ಭೋಗ್ಯದಬಾಬತು | |
| 6 | ದೇವಂಡಹಳ್ಳಿ ತಾಲ್ಲೂಕು ಸರ್ವಮಾನ್ಯ ನಾರಾಯಣಪುರ ಪಟೇಲ್ ನಂಜೇಗೌಡಗೆ .. | 50 | 0 | 0 | .. | ಡಿಟೋ | |
| | ಜುಮ್ಲಾ .. | 1738 | 9 | 9 | | | |

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 532.

ಮೃತಪಟ್ಟ ದನಗಹಳ್ಳಿ ನಂಜರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣೀಅರಸಿನವರು ಮೃತಪಟ್ಟ ಸದರೀ ನಂಜರಾಜೇಅರಸಿನವರಿಗೆ ದತ್ತು ಮಕ್ಕಳಾಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಕೃಷ್ಣೀ ಅರಸಿನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಂಜರಾಜೇ ಅರಸಿನವರ ಜಿಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣೀ ಅರಸಿನವರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜರಾಜೇ ಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಅಕ್ಟೋಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.